# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1588 |
| ಸದಸ್ಯರ ಹೆಸರು | ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ಟೆಂಡರ್ ಪ್ರಕ್ರಿಯೆಯಲ್ಲಿ ಹೆಚ್ಚುವರಿ ವೆಚ್ಚ (Cost Escalation) ಎಷ್ಟು ಪ್ರಕರಣಗಳಲ್ಲಿ ಕಂಡುಬಂದಿದೆ; ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ವಿಳಂಬದಿಂದ ಸರ್ಕಾರಕ್ಕೆ ಉಂಟಾದ ಹೆಚ್ಚುವರಿ ಭಾರ ಎಷ್ಟು; | ಲೋಕೋಪಯೋಗಿ ಇಲಾಖೆಯ ಕಳೆದ ಮೂರು ವರ್ಷಗಳಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 16 ಹೆಚ್ಚುವರಿ ವೆಚ್ಚದ (Cost Escalation) ಪ್ರಕರಣಗಳು ಉಂಟಾಗಿದ್ದು, ರೂ.23.28 ಕೋಟಿ ಹೆಚ್ಚುವರಿ ಮೊತ್ತ ಉಂಟಾಗಿರುತ್ತದೆ. |
| ಆ | ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಅಧಿಕಾರಿಗಳ ವಿರುದ್ಧ ಸ್ವೀಕೃತವಾಗಿರುವ ಭ್ರಷ್ಟಾಚಾರ ದೂರುಗಳ ಸಂಖ್ಯೆ ಎಷ್ಟು; ಪ್ರಸ್ತುತ ಸ್ವೀಕೃತವಾಗಿರುವ ದೂರುಗಳ ಸ್ಥಿತಿ ಏನು; ಎಷ್ಟು ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗಿದೆ; ಎಷ್ಟು ಪ್ರಕರಣಗಳು ನ್ಯಾಯಾಲಯಗಳಲ್ಲಿ ಇವೆ; | ಒಟ್ಟು 246 ಅಧಿಕಾರಿಗಳ ವಿರುದ್ಧ ಟೆಂಡರ್ ಪ್ರಕ್ರಿಯೆ ಮತ್ತು ಪ್ರಗತಿಯಲ್ಲಿನ ಲೋಪಗಳ ಕುರಿತು ದೂರುಗಳು ಸ್ವೀಕೃತವಾಗಿರುತ್ತವೆ.<br><br>ಈ ಪೈಕಿ 93 ದೂರು ಪ್ರಕರಣಗಳಲ್ಲಿ ಅಧೀಕ್ಷಕ ಇಂಜಿನಿಯರ್‌ಗಳ ವರದಿಯನ್ನಾಧರಿಸಿ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ.<br><br>ಮುಖ್ಯ ಇಂಜಿನಿಯರ್ ಕಛೇರಿಗಳಲ್ಲಿ ಒಟ್ಟು 28 ದೂರುಗಳು ಸ್ವೀಕೃತವಾಗಿದ್ದು, ಈ ದೂರುಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ದೂರುಗಳನ್ನು ಮುಕ್ತಾಯಗೊಳಿಸಿ ದೂರುದಾರರಿಗೆ ಹಿಂಬರಹ ನೀಡಲಾಗಿರುತ್ತದೆ.<br><br>29 ಪ್ರಕರಣಗಳಲ್ಲಿ ದೂರುಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಸಾಬೀತುಪಡಿಸುವ ಪೂರಕ ದಾಖಲಾತಿಗಳನ್ನು ಒದಗಿಸುವಂತೆ ದೂರುದಾರರಿಗೆ ಪತ್ರ ಬರೆಯಲಾಗಿರುತ್ತದೆ.<br><br>96 ಪ್ರಕರಣಗಳಲ್ಲಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ವೃತ್ತ ಕಛೇರಿಗಳಿಗೆ ಪತ್ರ ಬರೆಯಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |
| ಇ | ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಹಣೆಯ ಪ್ರಗತಿಯ (Work Progress) ಸಾರ್ವಜನಿಕರಿಗೆ ಲಭ್ಯವಾಗುವಂತೆ ಇಲಾಖೆಯ ಯಾವುದಾದರೂ ಡ್ಯಾಶ್ ಬೋರ್ಡ್ ಇದೆಯೇ; ಇದ್ದಲ್ಲಿ, ಅದರ ಕುರಿತು ಮಾಹಿತಿ ನೀಡುವುದು? | ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಹಣೆಯ ಪ್ರಗತಿಯ (Work Progress) ಸಾರ್ವಜನಿಕರಿಗೆ ಲಭ್ಯವಾಗುವಂತೆ ಇಲಾಖೆಯ ಯಾವುದೇ ಡ್ಯಾಶ್ ಬೋರ್ಡ್ ಇರುವುದಿಲ್ಲ. |

**ಸಂಖ್ಯೆ: ಲೋಇ 28 ಸಿಕ್ಯೂಎನ್ 2026**

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು